**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು**

**ಎಸ್.ಸಿ. ನಂಃ 10023/2018**

**ಚಾಸಾ ಃ 02**

**ಪ್ರಾಸಾ ಃ 02**

| | | |
|---|---|---|
| **ಹೆಸರು** | **ಃ** | **ರಘುನಾಥ್** |
| **ತಂದೆಯ ಹೆಸರು** | **ಃ** | **ಹೊನ್ನಯ್ಯ** |
| **ವಯಸ್ಸು** | **ಃ** | **34 ವರ್ಷ** |
| **ವೃತ್ತಿ** | **ಃ** | **ರಿಯಲ್ ಎಸ್ಟೇಟ್** |
| **ವಾಸ** | **ಃ** | **ದೊಡ್ಡಬಳ್ಳಾಪುರ** |

**ಈ ದಿನ ದಿನಾಂಕಃ 21.08.2016 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. ಚಾಸಾ-1 ನನ್ನ ತಮ್ಮ, ಚಾಸಾ 3 ನನ್ನ ತಾಯಿ, ಚಾಸಾ 4 ನನ್ನ ಚಿಕ್ಕಮ್ಮ. ಚಾಸಾ-5 ನನ್ನ ಚಿಕ್ಕಮ್ಮನ ಮಗ. ಈಗ ನ್ಯಾಯಾಲಯದಲ್ಲಿರುವ ಆರೋಪಿಗಳು ನನಗೆ ಗೊತ್ತಿಲ್ಲ. ನಮ್ಮ ಹಾಗೂ ಚಾಸಾ 4 ರವರ ಮನೆಗಳು ಶ್ರೀನಗರ ಬಡಾವಣೆಯಲ್ಲಿರುತ್ತವೆ. ಅವುಗಳು ನಮ್ಮ ಸ್ವಂತ ಮನೆಗಳಾಗಿರುತ್ತವೆ. ದಿಃ 12.10.2016 ರಂದು ಬೆಳಗಿನ ಜಾವ ಮಲಗಿದ್ದಾಗ ಯಾರೋ ಬಾಗಿಲು ತಟ್ಟಿದ ಶಬ್ದ ಕೇಳಿ ಬಾಗಿಲನ್ನು ತೆಗೆದಾಗ ಯಾರೋ ಮೂರು ಜನ ಬಂದು ರಾಡಿನಲ್ಲಿ ತಲೆಗೆ ಹೊಡೆದಾಗ ನಾನು ಎಚ್ಚರ ತಪ್ಪಿ ಬಿದ್ದೆ. ಎರಡು ದಿ ನಗಳ ನಂತರ ನನಗೆ ಪ್ರಜ್ಞೆ ಬಂದಾಗ ಆಸ್ಪತ್ರೆಯಲ್ಲಿದ್ದೆ. ತಲೆ ಹೊರತು ಪಡಿಸಿ ದೇಹದ ಬೇರೆ ಇತರೆ ಕಡೆ ಗಾಯಗಳು ಆಗಿರುವುದಿಲ್ಲ. ಈಗ ನನಗೆ ತೋರಿಸಿದ ಮು.ಮಾ 1 ಚಾಕು ಮತ್ತು ಮು.ಮಾ 2 ಕಬ್ಬಿಣದ ಪೈಪು ಇವುಗಳನ್ನು ನಾನು ಹಿಂದೆ ನೋಡಿಲ್ಲ. ಬೆಂಗಳೂರಿನ ಬಾಂಬೆ ಸಲೀಂ ಯಾರು ಎಂದು ನನಗೆ ಗೊತ್ತಿಲ್ಲ. ಆತನನ್ನು ವೀರಭದ್ರಪಾಳ್ಯದ ಬಳಿ ಕರೆದುಕೊಂಡು ಹೋಗಿ 1ನೇ ಆರೋಪಿಯ ಅಕ್ಕ ಹುಡುಗಿಯರನ್ನು ಇಟ್ಟುಕೊಂಡು ದಂಧೆ

ಮಾಡುತ್ತಾಳೆ ಹಾಗೂ ಆಕೆಯಿಂದ ಮಾಮೂಲು ಪಡೆಯಬೇಕೆಂದು ನಾನು ಬಾಂಬೆ ಸಲೀಂನನ್ನು ಕರೆದುಕೊಂಡು ಹೋಗಿರಲಿಲ್ಲ.

**2. ಈ ಹಂತದಲ್ಲಿ ಮಾಲುಪಟ್ಟಿ 143/2016 ರಲ್ಲಿರುವ ಐಟಂ 1 ಬರ್ಮುಡಾ ಮತ್ತು ಐಟಂ ನಂ 2 ಕಾಚಾ ಇವುಗಳನ್ನು ಮೊಹರು ಮಾಡಿ ಬಿಳಿ ಬಟ್ಟೆಯಲ್ಲಿ ಸುತ್ತಿದ್ದು ಅವುಗಳನ್ನು ಸಾಕ್ಷಿದಾರರಿಗೆ ತೋರಿಸುವ ಸಲುವಾಗಿ ಬಟ್ಟೆಯನ್ನು ತೆರೆದು ತೋರಿಸಲಾಗಿ ಸಾಕ್ಷಿದಾರರು ಸದರಿ ವಸ್ತುಗಳು ಅವರದ್ದಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿದಾರರಿಗೆ ಅವುಗಳನ್ನು ತೋರಿಸಲಾಗಿದೆ ಎಂಬ ಕಾರಣಕ್ಕಾಗಿ ಕ್ರಮವಾಗಿ ಅವುಗಳನ್ನು ಮು.ಮಾ 3 ಮತ್ತು 4 ಎಂದು ಗುರುತಿಸಲಾಯಿತು.**

3. ಸದರಿ ಆರೋಪಿಗಳು ನನ್ನ ತಮ್ಮನಿಗೆ ಮತ್ತು ನನ್ನ ತಾಯಿಯ ಮೇಲೆ ಸಹ ಹಲ್ಲೆ ಮಾಡಿದರು ಎಂದು ಅವರನ್ನು ಗುರುತಿಸಿ ನಾನು ಯಾವುದೇ ಹೇಳಿಕೆ ಕೊಟ್ಟಿರಲಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿದ್ದರಿಂದ ಅಭಿಯೋಜಕರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದ ಃ</u>**

4. ದಿ.12.10.2016 ರ ಬೆಳಗಿನ ಜಾವ 2.45 ಗಂಟೆಯಲ್ಲಿ ನಮ್ಮ ಮನೆಯ ಪ್ಯಾಸೇಜ್‌ಗೆ ಹಾಕಿರುವ ಬೀಗವನ್ನು ಹೊಡೆಯುವ ಶಬ್ದ ಕೇಳಿ ನಾನು ಹೊರಗೆ ಬಂದು ನೋಡಿದಾಗ ಈ ಕೇಸಿನ ಆರೋಪಿಗಳು ಅಲ್ಲಿದ್ದು, ನನ್ನ ತಲೆ ಮೇಲೆ ಮು.ಮಾ 2 ರಾಡಿನಿಂದ ಹೊಡೆದು ಅವಾಚ್ಯ ಶಬ್ದಗಳಿಂದ ಬೈದು ಮು.ಮಾ 1 ಚಾಕುವಿನಿಂದ ತಿವಿದು ರಕ್ತಗಾಯ ಪಡಿಸಿದ್ದಲ್ಲದೆ ನನ್ನ ತಮ್ಮನ ಎಡಕೆನ್ನೆಗೆ ಸಹ ಚಾಕುವಿನಿಂದ ಇರಿದು ಬಲಗಾಲಿನ ತೊಡೆಗೆ ತಿವಿದರು ಎಂದರೆ ಸರಿಯಲ್ಲ. ಅಷ್ಟರಲ್ಲಿ ನಮ್ಮ ತಾಯಿ ಸಹ ಎದ್ದು ಹೊರಗೆ ಬಂದಾಗ ಅವರ ಮೇಲೆ ಸಹ ಆರೋಪಿಗಳು ಹಲ್ಲೆ ಮಾಡಿದ್ದನ್ನು ನಾನು ಕಣ್ಣಾರೆ ಕಂಡೆ, ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ಆರೋಪಿಗಳು ಆ ರೀತಿ ಹಲ್ಲೆ ಮಾಡಿದ್ದರು ಎಂದು ನಾನು ನಿಪಿ-4

ರೀತ್ಯಾ ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಮು.ಮಾ 3 ಮತ್ತು 4 ನನಗೆ ಸೇರಿದ ಹಾಗೂ ಕೃತ್ಯ ನಡೆದ ಸಮಯದಲ್ಲಿ ನಾನು ಹಾಕಿದ್ದ ಹಾಗೂ ರಕ್ತ ತಾಗಿದ್ದ ಬಟ್ಟೆಗಳು ಆಗಿವೆ ಎಂದರೆ ಸರಿಯಲ್ಲ. ಸದರಿ ಬಟ್ಟೆಗಳನ್ನು ನಮ್ಮ ತಾಯಿಯವರೇ ಪೋಲೀಸು ಠಾಣೆಗೆ ಹೋಗಿ ಕೊಟ್ಟಾಗ ಪೋಲೀಸರು ಅಮಾನತ್ತು ಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ.

5. ಬಾಂಬೆ ಸಲೀಂನನ್ನು 1ನೇ ಆರೋಪಿ ಮತ್ತು ಆತನ ಕಡೆಯವರು ಹೊಡೆದು ಕಳುಹಿಸಿದ್ದು ನಾನೇ ಆತನನ್ನು ಚಾಡಿ ಹೇಳಿ ಊರಿನ ಬಳಿ ಕರೆದುಕೊಂಡು ಬಂದಿದ್ದೆ ಎಂಬ ಕಾರಣಕ್ಕಾಗಿ 1ನೇ ಆರೋಪಿ ಇತರೆ ಆರೋಪಿಗಳೊಂದಿಗೆ ನನ್ನ ಮೇಲೆ ಹಲ್ಲೆ ಮಾಡಿಸಿದ್ದ ಎಂದು ಸಹ ನಾನು ನನ್ನ ಹೇಳಿಕೆಯಲ್ಲಿ ಪೋಲೀಸರಿಗೆ ತಿಳಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳೇ ಕೃತ್ಯ ಮಾಡಿರುತ್ತಾರೆಂದು ಗೊತ್ತಿದ್ದರೂ ಅವರಿಗೆ ಹೆದರಿ ನಿಜ ವಿಚಾರವನ್ನು ಮುಚ್ಚಿಟ್ಟು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿಗಳ ಪರ ವಕೀಲರವರಿಂದ :**

6. ಏನೂ ಇಲ್ಲ.

**ಮರು ವಿಚಾರಣೆ :**

ಇಲ್ಲ.

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು**

**ಎಸ್‌.ಸಿ. ನಂಃ 10023/2018**

**ಚಾಸಾ ಃ 01**

**ಪ್ರಾಸಾ ಃ 01**

| | | |
|---|---|---|
| **ಹೆಸರು** | **ಃ** | **ಶಶಿಕುಮಾರ್** |
| **ತಂದೆಯ ಹೆಸರು** | **ಃ** | **ಹೊನ್ನಯ್ಯ** |
| **ವಯಸ್ಸು** | **ಃ** | **27 ವರ್ಷ** |
| **ವೃತ್ತಿ** | **ಃ** | **ಏರ್‌ಟೆಲ್ ಕಂಪನಿಯಲ್ಲಿ ಕೆಲಸ** |
| **ವಾಸ** | **ಃ** | **ದೊಡ್ಡಬಳ್ಳಾಪುರ** |

**ಈ ದಿನ ದಿನಾಂಕಃ 21.08.2016 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. ಚಾಸಾ-2 ನನ್ನ ಅಣ್ಣ, ಚಾಸಾ 3 ನನ್ನ ತಾಯಿ, ಚಾಸಾ 4 ನನ್ನ ಚಿಕ್ಕಮ್ಮ. ಚಾಸಾ-5 ನನ್ನ ಚಿಕ್ಕಮ್ಮನ ಮಗ. ಈಗ ನ್ಯಾಯಾಲಯದಲ್ಲಿರುವ ಆರೋಪಿಗಳು ನನಗೆ ಗೊತ್ತಿಲ್ಲ. ನಮ್ಮ ಹಾಗೂ ಚಾಸಾ 4 ರವರ ಮನೆಗಳು ಶ್ರೀನಗರ ಬಡಾವಣೆಯಲ್ಲಿರುತ್ತವೆ. ಅವುಗಳು

ನಮ್ಮ ಸ್ವಂತ ಮನೆಗಳಾಗಿರುತ್ತವೆ. ದಿಃ 12.10.2016 ರಂದು ರಾತ್ರಿ ಮಲಗಿದ್ದಾಗ ಯಾವುದೋ ಶಬ್ದ ಕೇಳಿ ಎಚ್ಚರಿಕೆಯಾಗಿದ್ದು ಪಕ್ಕದ ಕೋಣೆಯಲ್ಲಿ ಹೋಗಿ ನೋಡಿದಾಗ ನಮ್ಮ ಅಣ್ಣ ಎಚ್ಚರ ತಪ್ಪಿ ಬಿದ್ದಿದ್ದ. ಆತನ ಹೊಟ್ಟೆ ಮತ್ತು ತಲೆಯ ಮೇಲೆ ಗಾಯಗಳಾಗಿ ರಕ್ತ ಬರುತ್ತಿತ್ತು. ಆತನನ್ನು ನಾನು ಕೂಡಲೇ ಬ್ಯಾಟರಾಯನಪುರ ಪ್ರೊಲೈಫ್ ಆಸ್ಪತ್ರೆಗೆ ಕರೆದುಕೊಂಡು ಹೋದೆ. ಈಗ ನೋಡಿದ ದೂರಿನಲ್ಲಿ ನನ್ನ ಸಹಿ ಇದೆ. ದೂರನ್ನು ನಿಪಿ-1 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ-1ಎ ಎಂದು ಗುರುತಿಸಲಾಯಿತು.

2. ಮರುದಿನ ಬೆಳಗ್ಗೆ ಪೋಲೀಸರು ಬಂದು ವಿಚಾರಿಸಿದಾಗ ನನ್ನ ಅಣ್ಣನ ಮೇಲೆ ಯಾರು ಹಲ್ಲೆ ಮಾಡಿದರು ಎಂದು ಗೊತ್ತಿಲ್ಲ ಎಂದು ಹೇಳಿದೆ. ಆಗ ನಿಪಿ-1ಕ್ಕೆ ಸಹಿಯನ್ನು ಅವರು ಪಡೆದುಕೊಂಡರು. ಚಾಸಾ 2 ಹೊರತುಪಡಿಸಿ ನಮ್ಮ ಮನೆಯ ಬೇರೆ ಯಾರಿಗೂ ಗಾಯಗಳಾಗಿರಲಿಲ್ಲ. ಠಾಣೆಯಲ್ಲಿ ಆರೋಪಿಗಳನ್ನು ಗುರುತಿಸಿ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ. ಈ ಕೇಸಿನ 1ನೇ ಆರೋಪಿ ಯಾರು ಎಂದು ಗೊತ್ತಿಲ್ಲ. ಹಳೆ ದ್ವೇಷದಿಂದ 1ನೇ ಆರೋಪಿ ಬೇರೆ ಆರೋಪಿಗಳನ್ನು ಕರೆದುಕೊಂಡು ಬಂದು ನನ್ನ ಮೇಲೆ ಹಲ್ಲೆ ಮಾಡಿಸಿರುತ್ತಾನೆಂದು ಚಾಸಾ 2 ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ನನಗೆ ತಿಳಿಸಿರುತ್ತಾನೆಂದು ಪೋಲೀಸರಿಗೆ ಮುಂದುವರೆದ ಹೇಳಿಕೆ ಕೊಟ್ಟಿರಲಿಲ್ಲ.

**3. ಈ ಹಂತದಲ್ಲಿ ಮಾಲುಪಟ್ಟಿ 150/2016 ರಲ್ಲಿರುವ ಐಟಂ 1 ಚಾಕು ಮತ್ತು ಐಟಂ ನಂ ಸ್ಟೀಲ್ ಪೈಪು ಇವುಗಳನ್ನು ಮೊಹರು ಮಾಡಿ ಬಿಳಿ ಬಟ್ಟೆಯಲ್ಲಿ ಸುತ್ತಿದ್ದು ಅವುಗಳನ್ನು ಸಾಕ್ಷಿದಾರರಿಗೆ ತೋರಿಸುವ ಸಲುವಾಗಿ ಬಟ್ಟೆಯನ್ನು ತೆರೆದು ತೋರಿಸಲಾಗಿ ಸಾಕ್ಷಿದಾರರು ಸದರಿ ವಸ್ತುಗಳನ್ನು ಈ ಹಿಂದೆ ನೋಡಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿದಾರರಿಗೆ ಅವುಗಳನ್ನು ತೋರಿಸಲಾಗಿದೆ ಎಂಬ ಕಾರಣಕ್ಕಾಗಿ ಕ್ರಮವಾಗಿ ಅವುಗಳನ್ನು ಮು.ಮಾ 1 ಮತ್ತು 2 ಎಂದು ಗುರುತಿಸಲಾಯಿತು.**

4. ನಿಪಿ-1 ದೂರಿನಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ನನ್ನ ಅಣ್ಣನಿಗೆ ಆದ ಗಾಯಗಳಿಗೆ ಹಾಗೂ ಆರೋಪಿಗಳಿಗೆ ಏನು ಸಂಬಂಧ ಎಂದು ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿದ್ದರಿಂದ ಅಭಿಯೋಜಕರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದ :**

5. ದಿ.12.10.2016 ರ ಬೆಳಗಿನ ಜಾವ 2.45 ಗಂಟೆಯಲ್ಲಿ ನಮ್ಮ ಮನೆಯ ಪ್ಯಾಸೇಜ್‌ಗೆ ಹಾಕಿರುವ ಬೀಗವನ್ನು ಹೊಡೆಯುವ ಶಬ್ದ ಕೇಳಿ ಚಾಸಾ-2 ಹೊರಗೆ ಬಂದು ನೋಡಿದಾಗ ಈ ಕೇಸಿನ ಆರೋಪಿಗಳು ಅಲ್ಲಿದ್ದು, ಆತನ ತಲೆ ಮೇಲೆ ಮು.ಮಾ 2 ರಾಡಿನಿಂದ ಹೊಡೆದು ಅವಾಚ್ಯ ಶಬ್ದಗಳಿಂದ ಬೈದು ಮು.ಮಾ 1 ಚಾಕುವಿನಿಂದ ತಿವಿದು ರಕ್ತಗಾಯ ಪಡಿಸಿದ್ದಲ್ಲದೆ ನನ್ನ ಎಡಕೆನ್ನೆಗೆ ಸಹ ಚಾಕುವಿನಿಂದ ಇರಿದು ನನ್ನ ಬಲಗಾಲಿನ ತೊಡೆಗೆ ತಿವಿದರು ಎಂದರೆ ಸರಿಯಲ್ಲ. ಅಷ್ಟರಲ್ಲಿ ನಮ್ಮ ತಾಯಿ ಸಹ ಎದ್ದು ಹೊರಗೆ ಬಂದಾಗ ಅವರ ಮೇಲೆ ಸಹ ಆರೋಪಿಗಳು ಹಲ್ಲೆ ಮಾಡಿದ್ದನ್ನು ನಾನು ಕಣ್ಣಾರೆ ಕಂಡೆ, ನನ್ನ ಅಣ್ಣನನ್ನು ಕೊಲೆ ಮಾಡುವ ಉದ್ದೇಶದಿಂದ ಆರೋಪಿಗಳು ಆ ರೀತಿ ಹಲ್ಲೆ ಮಾಡಿದ್ದರು ಎಂದು ನಾನು ನಿಪಿ-1 ರೀತ್ಯಾ ದೂರನ್ನು ಪೋಲೀಸರಿಗೆ ಕೊಟ್ಟಿದ್ದೆ ಎಂದರೆ ಸರಿಯಲ್ಲ.

6. ಚಾಸಾ 2 ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಗಲಾಟೆ ಬಗ್ಗೆ ವಿಚಾರಿಸಿದ್ದು ಹಳೆ ದ್ವೇಷದಿಂದ 1ನೇ ಆರೋಪಿ ಯಲ್ಲಪ್ಪ ಮತ್ತು ಆತನ ಸ್ನೇಹಿತರು ಹಲ್ಲೆ ಮಾಡಿರುವುದಾಗಿ ತಿಳಿಸಿದ್ದು ದಿಃ 02.11.2016 ರಂದು ದಸ್ತಗಿರಿಯಾದ ಆರೋಪಿತರನ್ನು ನಾನು ಠಾಣೆಯಲ್ಲಿ ನೋಡಿ ಗುರುತಿಸಿದ್ದೆ ಎಂದರೆ ಸರಿಯಲ್ಲ. ನನ್ನ ಅಣ್ಣನನ್ನು ಕೊಲೆ ಮಾಡುವ ಉದ್ದೇಶದಿಂದ ಆರೋಪಿತರುಗಳು ಹಲ್ಲೆ ಮಾಡಿದ್ದು ಬಿಡಿಸಲು ಹೋದ ನನ್ನ ಹಾಗೂ ನನ್ನ ತಾಯಿ ಮೇಲೆ ಹಲ್ಲೆ ಮಾಡಿರುತ್ತಾರೆಂದು ನಿಪಿ3 ರಂತೆ ಮುಂದುವರೆದ ಹೇಳಿಕೆಗಳನ್ನು ಕೊಟ್ಟಿದ್ದೇನೆ ಎಂದರೆ

ಸರಿಯಲ್ಲ. ಆರೋಪಿಗಳೇ ಕೃತ್ಯ ಮಾಡಿರುತ್ತಾರೆಂದು ಗೊತ್ತಿದ್ದರೂ ಅವರಿಗೆ ಹೆದರಿ ನಿಜ ವಿಚಾರವನ್ನು ಮುಚ್ಚಿಟ್ಟು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿಗಳ ಪರ ವಕೀಲರವರಿಂದ ಃ**

7. ಏನೂ ಇಲ್ಲ.

**ಮರು ವಿಚಾರಣೆ** ಃ

ಇಲ್ಲ.

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ